# ಏಳು ಹನುಮಂತ ಎಷ್ಟು ನಿದ್ರೆ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 157.
2. **Note:** Singer has followed these lyrics.
3. **Note:** This song is not available other ref. books that I referred.

ರಾಗ: ಭೂಪಾಳಿ ತಾಳ: ಝಂಪೆ

ಏಳು ಹನುಮಂತ ಎಷ್ಟು ನಿದ್ರೆ ‖ ಪ ‖

ಮಾತನಾಡಲು ಬೇಕು ಮುದ್ರಿಕೆ ತರಲುಬೇಕು
ಹರಿ ಕುಶಲ ಜಾನಕಿಗೆ ತಿಳಿಸಬೇಕು
ವನವ ಕೀಳಲು ಬೇಕು ಚೂಡಾಮಣಿಯ ತರಲುಬೇಕು
ಹರಿ ಹರುಷದಿಂದಲಿ ಖ್ಯಾತಿಯ ಪಡಲುಬೇಕು ‖ ೧ ‖

ಶರಧಿ ಲಂಘಿಸಬೇಕು ರಘುಪತಿಯ ಕೂಡಿರಬೇಕು
ದುರುಳ ಇಂದ್ರಜಿತನ ಗೆಲಿಯಬೇಕು
ಅನುಜ ಲಕ್ಷ್ಮಣಗೆ ಸಂಜೀವನ ತಂದು ಕೊಡಲುಬೇಕು
ಹನುಮಂತ ಬಲವಂತ ಎಂದೆನಿಸಬೇಕು ‖ ೨ ‖

ದುಷ್ಟ ರಕ್ಕಸರನೆಲ್ಲ ಕುಟ್ಟಿ ಕೆಡಹಲುಬೇಕು
ಹತ್ತು ತಲೆ ರಾವಣನ ಬಲವಿಳಿಸಲುಬೇಕು
ಭಕ್ತ ವಿಭೀಷಣನಿಗೆ ಪಟ್ಟಗಟ್ಟಲುಬೇಕು
ಲಕ್ಷ್ಮಿ ಸಹಿತ ಅಯೋಧ್ಯೆಗೆ ತೆರಳಲುಬೇಕು ‖ ೩ ‖

ಕುರು ಕುಲದಲ್ಲಿ ಕುಂತಿ ಸುತನಾಗಿ ಜನಿಸಲುಬೇಕು
ರಣದಲ್ಲಿ ಕೌರವರ ಗೆಲಿಯಬೇಕು
ವನದೊಳಗೆ ಘನ ತೃಷೆಯ ಘಾಸಿಪಡಿಸಲುಬೇಕು
ಮಡದಿಗೆ ಸೌಗಂಧವ ತರಲುಬೇಕು ‖ ೪ ‖

ಯತಿಯಾಗಿ ಬರಬೇಕು ಕುಮತ ಖಂಡಿಸಬೇಕು
ಅದ್ಭುತ ವಾದಿಗಳ ಗೆಲಿಯಬೇಕು
ಮಧ್ವ ಶಾಸ್ತ್ರವ ಲೋಕಕೆಲ್ಲಾ ಭೋಧಿಸಬೇಕು
ಮುದ್ದು ಪುರಂದರ ವಿಠ್ಠಲ ಎಂದೆನಿಸಬೇಕು || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇಲ್ಲಿ ಮೂರು ನುಡಿಗಳಲ್ಲಿ ರಾಮಾಯಣವನ್ನೆಲ್ಲ ಸಂಗ್ರಹಿಸಿದ್ದಾರೆ. ಮುಂದಿನ ನುಡಿಯಲ್ಲಿ ಭಾರತದ ಕತೆಯಲ್ಲಿ ಭೀಮನ ಪಾತ್ರ ಸೂಕ್ಷ್ಮವಾಗಿ ಬಂದಿದೆ; ಕಡೆಯ ನುಡಿ ಮಧ್ವಾಚಾರ್ಯರ ಪ್ರಸ್ತುತತೆಯನ್ನು ಹೇಳುತ್ತದೆ.

**ಮಾತನಾಡಲು ಬೇಕು –** ರಾಮಲಕ್ಷ್ಮಣರು ಪಂಪಾಸರಸ್ಸನ್ನು ದಾಟಿ ಋಷ್ಯಮೂಕಕ್ಕೆ ಬಂದಾಗ ಹನುಮಂತನೇ ಅವರನ್ನು ಎದುರುಗೊಂಡು, ರಾಮನೊಂದಿಗೆ ಮಾತನಾಡಿ ಅವನ ಪ್ರೀತಿಯನ್ನು ಪಡೆದುಕೊಂಡವನು.

**ಮುದ್ರಿಕೆ... –** ರಾಮನ ಮುದ್ರಿಕೆಯನ್ನು ಸೀತೆಗೆ ಒಯ್ದವನು.

**ಚೂಡಾಮಣಿ –** ಸೀತೆ ಕೊಟ್ಟ ಚೂಡಾಮಣಿಯನ್ನು ರಾಮನಿಗೆ ಮುಟ್ಟಿಸಿದವನು.

**ಹರಿ ಹರುಷದಿಂದಲಿ –** ರಾಮನನ್ನು ಸಂತೋಷಪಡಿಸಿದನೆಂದು ಹನುಮಂತನ ಯಶಸ್ಸು ಹೆಚ್ಚಿತು.

**ಲಕ್ಷ್ಮೀ ಸಹಿತ –** ಲಕ್ಷ್ಮಿಯ ಅವತಾರವಾದ ಸೀತೆಯೊಂದಿಗೆ.

**ವನದೊಳಗೆ... –** ಪಾಂಡವರ ವನವಾಸದಲ್ಲಿ ಯಕ್ಷಪ್ರಶ್ನೆಯ ಸಂದರ್ಭ.

**ಮಡದಿಗೆ... –** ದ್ರೌಪದಿಗೆ ಸೌಗಂಧಿಕಪುಷ್ಪವನ್ನು ತಂದುಕೊಟ್ಟ ಪ್ರಸಂಗ.

**ಅದ್ಭುತವಾದಿಗಳ –** ಮಾಯಾವಾದಿಗಳ. ಮಿಥ್ಯವಾಗಿರುವ ಜಗತ್ತು ಸತ್ಯವಾಗಿರುವಂತೆ ತೋರಿಕೊಳ್ಳುವುದೇ ಅದ್ಭುತ; ಆದರೆ ಅದು ತೋರಿಕೆಯಷ್ಟೆ, ಭ್ರಮೆಯಿಂದ ಉಂಟಾದದ್ದು. ಸಂಜೆಯ ಮಬ್ಬಿನಲ್ಲಿ ಹಗ್ಗವು ಹಾವಾಗಿ ತೋರಿಕೊಳ್ಳುವಂತೆ; ದೀಪ ತಂದಾಗ ಹಾವು ಮಾಯವಾಗುತ್ತದೆ.

**Classification:** Keerthane
**Ankita:** purandara vittala

**Location:** NA
**Category:** Hanuma Stuti, Udaya Raga
**Sub-Category:** hanuma, nidde, sita, choodamani, Samudra, rama, Lakshmana, asura, ravana, Vibhishana, Lakshmi, ayodhya, bhima, kourava, kaadu, draupadi, madhva, madhwacharya, hanuma-bhima-madhva, loka,
**Pravachana:** NA
**Explanation:** NA